ಭೂಸಾರ ನೀರಿನ ಸಂರಕ್ಷಣಾ ಕಾರ್ಯಕ್ರಮಗಳ ಬಗ್ಗೆ

163 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭೂಸಾರ ನೀರಿನ ಸಂರಕ್ಷಣಾ ಕಾರ್ಯಕ್ರಮಗಳ ಯೋಜನೆಯನ್ನು ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಭೂ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಂಡಿದೆ ಆದರೆ ಈ ಭೂ ಅಭಿವೃದ್ಧಿ ಕಾರ್ಯಕ್ರಮದ ಯೋಜನೆಗಳನ್ನು ಇತರೆ ಪಂಗಡದವರಿಗೆ ಸರ್ಕಾರವು ನೀಡುತ್ತಿಲ್ಲ ಏಕೆ?*

ಆ) *ಈ ಭೂಸಾರ ನೀರಿನ ಸಂರಕ್ಷಣಾ ಯೋಜನೆಯನ್ನು ಇತರೆ ಪಂಗಡಗಳಿಗೆ ನೀಡಿಲ್ಲದ್ದರಿಂದ ಸರ್ಕಾರಕ್ಕೆ ಆಗಿರುವ ನಷ್ಟವೇನು?*

ಶ್ರೀ ಎನ್. ಚಿಕ್ಕೇಗೌಡ(ಕೃಷಿ ಸಚಿವರು):

ಅ) ಇಲಾಖೆಯಲ್ಲಿ ಭೂಸಾರ ನೀರಿನ ಸಂರಕ್ಷಣಾ ಕೆಲಸಗಳನ್ನು ಜಲಾನಯನ ಆಧಾರದ ಮೇಲೆ ತೆಗೆದುಕೊಳ್ಳುತ್ತಿದ್ದು ಜಲಾನಯನದಲ್ಲಿ ಬರುವ ಎಲ್ಲಾ ರೈತ ವರ್ಗದವರ ಭೂ ಅಭಿವೃದ್ಧಿಯಾಗುತ್ತಿದೆ.

ಆ) ಮೇಲ್ಕಂಡ ಕಾರಣದಿಂದಾಗಿ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರೀ-ಸರ್ವೆ ಮಾಡದಿರುವ ಬಗ್ಗೆ

164 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೆ.ಎಲ್. ಆರ್. ಆ್ಯಕ್ಟ್ ಪ್ರಕಾರ 30 ವರ್ಷಗಳಿಗೆ ಒಮ್ಮೆ ರೀಸರ್ವೆ ಆಗಬೇಕಾಗಿದ್ದು,ಆದರೆ ಇದುವರೆವಿಗೂ ರೀಸರ್ವೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಜಮೀನುಗಳಲ್ಲಿನ ಬದಲಾವಣೆಗಳನ್ನು ಗುರುತಿಸಲಾಗದೇ ರೈತರಿಗೂ ಮತ್ತು ಜಮೀನುದಾರರಿಗೂ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಇದರ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು):

ಅ) ಹೌದು.

ಆ) ಹೌದು.

ಇ) ಸಮಗ್ರ ಮರು-ಭೂಮಾಪನ ಕಾರ್ಯವನ್ನು ಇಡೀ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಕೈಗೊಳ್ಳುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. ಪ್ರಸ್ತುತ ಆರ್ಥಿಕ ದಿಗ್ಬಂಧನ ಮತ್ತು ಸಿಬ್ಬಂದಿ ಕೊರತೆ ಇರುವ ಪ್ರಯುಕ್ತ ಈ ಕಾರ್ಯವನ್ನು ಹಂತ ಹಂತವಾಗಿ ಕೈಗೊಳ್ಳಲು ಪರಿಶೀಲಿಸಲಾಗುವುದು.

ಮಾಗಡಿ ತಾಲ್ಲೂಕಿನಲ್ಲಿ ದರಖಾಸ್ತು ಜಮೀನಿಗಾಗಿ ಅರ್ಜಿಸಲ್ಲಿಸಿದವರ ಸಂಖ್ಯೆ

165 - ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಾಗಡಿ ತಾಲ್ಲೂಕಿನಲ್ಲಿ ದರಖಾಸ್ತು ಜಮೀನು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು?*